**ದಿನಾಂಕಃ 18/02/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ಶ್ರೀ. ಡಿ ಪಿ ಎಲ್ ವಕೀಲರಿಂದಃ**

1. ವಾದಿ ಯಾವ ಪರಿಹಾರ ಕೋರಿ ಮತ್ತು ಯಾವ ಸರ್ವೆ ನಂಬರಿಗೆ, ಚಕ್ಕುಬಂದಿಗೆ ಈ ದಾವೆ ಹೂಡಿದ್ದಾರೆಂದು ಗೊತ್ತಿಲ್ಲ. ಪೂಃ ಸ. ನಂ. 67/1 ರ ಜಮೀನು, ಪಃ ಸ. ನಂ. 67/3 ರ ಜಮೀನು, ಉಃ ರಸ್ತೆ, ದಃ ಸ. ನಂ. 69 ರ ಜಮೀನು, ಈ ಮಧ್ಯ ಇರುವ ಸ. ನಂ. 67/2 ರ 1 ಎಕರೆ 1 ಗುಂಟೆ ಜಮೀನಿನಲ್ಲಿ ವಾದಿ ಮತ್ತು ಅವರ ಕುಟುಂಬದವರು ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ಈಗ ಹೇಳಿದ ಚಕ್ಕುಬಂದಿಯಲ್ಲಿ ನಮಗೆ ಹಕ್ಕು ಮತ್ತು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ಪೂಃ ಸ. ನಂ. 67/2 ರ ಜಮೀನು, ಪಃ ರಾಮಚಂದ್ರಚಾರಿ ರವರ ಜಮೀನು, ಉಃ ರಸ್ತೆ, ದಃ ಹುಚ್ಚೇಗೌಡರ ಜಮೀನು, ಈ ಮಧ್ಯ ಇರುವ ಸ. ನಂ. 67/3 ರ 1 ಎಕರೆ ಜಮೀನಿನಲ್ಲಿ ವಾದಿ ಮತ್ತು ಅವರ ಕುಟುಂಬದವರು ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ಸದರಿ ಚಕ್ಕುಬಂದಿಗಳಲ್ಲಿ ನಾವು ಸ್ವಾಧೀನ ಇರುವ ಬಗ್ಗೆ ಕ್ರಯಪತ್ರ, ಎಂ ಆರ್, ತಹಸೀಲ್ದಾರ ರವರ ವರದಿ, ಆರ್.ಟಿ.ಸಿ. ದಾಖಲೆ ನೀಡಿದ್ದೇನೆ.

2. ದಾವಾ ಸ್ವತ್ತುಗಳು ವಾದಿಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ರಾಮಚಂದ್ರಚಾರಿ ರವರ ಹೆಸರಿನಲ್ಲಿದೆ. ದಾವಾ ಸ್ವತ್ತುಗೆ ಸಂಬಂಧಿಸಿದಂತೆ ನನ್ನ ಹೆಸರಿನಲ್ಲಿರುವ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತುನ ದಾಖಲೆಗಳು ನನ್ನ ತಂದೆಯ ಹೆಸರಿನಲ್ಲಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ವಾದಿಯ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ವಾದಿಗೆ ಅವರ ಕುಟುಂಬದವರು ನೊಂದಾಯಿತ ವಿಭಾಗ ಪತ್ರ ಮಾಡಿಕೊಂಡು, ಎಂ ಆರ್ 4/2010-11 ರಂತೆ ವಾದಿಯ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**

**ಪಿರಿಯಾಪಟ್ಟಣ.**